# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 163 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 29.12.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 163 • PRGI No:KARKAN/2023/88055 • VIJAYANAGARA • 29.12.2024 • Sunday • Page:04 • Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper



ಸುದ್ದಿ, ಜಾಹೀರಾತು ಕಚೇರಿ

ವಿಜಯನಗರ ಜಿಲ್ಲೆಯ
ಸುದ್ದಿ ಜಾಹೀರಾತು
ಪ್ರಕಟಣೆಗಾಗಿ
ಈ ಕೆಳಗಿನ ಕಚೇರಿ ವಿಳಾಸ
ಸಂಪರ್ಕಿಸಿ

ಹಂಪಿ ಟೈಮ್ಸ್
ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ,
ವಿಜಯನಗರ ಜಿಲ್ಲೆ.

94486 33038
Email: hampitimes@gmail.com



ಮಕ್ಕಳ ಜ್ಞಾನಭಂಡಾರ ಹೆಚ್ಚಿಸಲು
ಇರಲಿ ಮನೆಗೊಂದು ದಿನಪತ್ರಿಕೆ

ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ
ಪ್ರಯೋಜನೆಗಳು

ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ

ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
99029 09399, 99805 59681
97407 42251, 80735 89125



ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ. ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ.
ಡಿ..ವಿ.ಜಿ.


# ಹಣಕೊಡದಿದ್ರೆ ಹೆರಿಗೆಗೆ ಹೊರಮಾರ್ಗ

# ಸೌಲಭ್ಯ ಕಲ್ಪಿಸಿ ಬಡವರ ಜೀವ ಉಳಿಸಿ

## ಸಂಘಟನೆಯ ಈಡಿಗರ ಮಂಜುನಾಥ ಆರೋಪ | ಜಿಲ್ಲೆಯಲ್ಲಿ ಹೆರಿಗೆ ಆಸ್ಪತ್ರೆ ಇದ್ದರೂ ಹೊರ ಜಿಲ್ಲೆಗೇಕೆ ಕಳಿಸ್ತೀರಿ?

## ಸರ್ಕಾರಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳ ಕೊರತೆ ನೆಪ ಹೇಳ್ಬೇಡಿ | ಸೌಕರ್ಯ ಕಲ್ಪಿಸಿ ತಾಯಿ ಮಗುವಿನ ಆರೋಗ್ಯ ರಕ್ಷಿಸಿ






**ಹಂಪಿ ಟೈಮ್ಸ್ ಹೊಸಪೇಟೆ**

ಬಡವರ ಬಂಧುಗಳಂತಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಭೂತ ಸೌಲಭ್ಯಗಳು ಕೊರತೆಯಾಗದಂತೆ ಮತ್ತು ಅಗತ್ಯ ವೈದ್ಯರು, ಸಿಬ್ಬಂದಿ ನೇಮಿಸಬೇಕೆಂದು ಆಗ್ರಹಿಸಿ ಡಿವೈಎಫ್ಐ ಸಂಘಟನೆಯ ಪದಾಧಿಕಾರಿಗಳು ಶನಿವಾರ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಎದರು ಪ್ರತಿಭಟನೆ ನಡೆಸಿ, ಡಿಎಚ್ಒಗೆ ಮನವಿ ಸಲ್ಲಿಸಿ ನಂತರ ಶಾಸಕ ಎಚ್.ಆರ್.ಗವಿಯಪ್ಪನವರ ಗೃಹಕ್ಕೆ ತೆರಳಿ ಮನವಿ ಸಲ್ಲಿಸಿದರು.

ಸಂಘಟನೆಯ ಪ್ರಧಾನಕಾರ್ಯದರ್ಶಿ ಈಡಿಗರ ಮಂಜುನಾಥ ಮಾತನಾಡಿ, ಸರ್ಕಾರಿ ಆಸ್ಪತ್ರೆಯಲ್ಲೆ ಹೆರಿಗೆ ಮಾಡಿಸಿಕೊಳ್ಳಬೇಕೆಂದು ಬಂದವರಿಂದ ಹಣ ಪಡೆಯುವುದು ಸಾಮಾನ್ಯವಾಗಿದೆ. ಹಣ ನೀಡದವರಿಗೆ ಸೌಲಭ್ಯಗಳ ಕೊರತೆ ನೆಪ ಹೇಳಿ ಪಕ್ಕದ ಜಿಲ್ಲೆಗೆ ತೆರಳಲು ವೈದ್ಯರು ಸೂಚಿಸುತ್ತಾರೆಂದು ಆರೋಪಿಸಿದರು. ಸರ್ಕಾರಿ ಆಸ್ಪತ್ರೆಗೆ ಬಂದವರಿಗೆ ಸಮರ್ಪಕ ಚಿಕಿತ್ಸೆ ದೊರೆಯುವಂತೆ ಅಗತ್ಯ ಮೂಲಭೂತ ಸೌಲಭ್ಯ ಹಾಗೂ ಚಿಕಿತ್ಸಾ ಸಲಕರಣೆಗಳನ್ನು ಒದಗಿಸಿ, ವೈದ್ಯರು, ಸಿಬ್ಬಂದಿಗಳನ್ನು ಸರ್ಕಾರ ಕೂಡಲೇ ನೇಮಿಸಬೇಕು. ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಜಿಲ್ಲಾಧಿಕಾರಿಗಳು ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ಅನೇಕ ಮಾರ್ಪಾಡುಗಳನ್ನು ಮಾಡಿದರೂ, ಹಣ ಕೇಳುವುದು ನಿಂತಿಲ್ಲ. ಸರ್ಕಾರ ವೈದ್ಯರಿಗೆ, ಸಿಬ್ಬಂದಿಗೆ ವೇತನ ನೀಡುತ್ತದೆಯೋ ಇಲ್ಲವೋ ಎಂಬುದ ರೋಗಿಗಳ ಪ್ರಶ್ನೆಯಾಗಿದೆ. ಬಡ ಮಹಿಳೆಯರು ಗರ್ಭಧರಿಸಲು ಚಿಂತಿಸಬೇಕಾದ ದಿನಗಳು ಎದುರಾಗುವ ಮುನ್ನ ಸರ್ಕಾರ ಎಚ್ಚೆತ್ತುಕೊಂಡು ಪಕ್ಕದ ಜಿಲ್ಲೆಗಳಿಗೆ ಹೆರಿಗೆಗೆ ಕಳುಹಿಸುವುದಕ್ಕೆ ಕಡಿವಾಣ ಹಾಕಬೇಕು. ವೈದ್ಯರು ಸಮಸ್ಯೆಗಳನ್ನು ಜನಪ್ರತಿನಿಧಿಗಳು ಆಲಿಸಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಖಾಲಿ ಇರುವ ರೇಡಿಯೋ ಲಾಜಿಸ್ಟ್, ಇಸಿಜಿ ಟೆಕ್ನಿಷಿಯನ್ ಸೇರಿದಂತೆ ಎಲ್ಲ ಪರಿಣಿತ ವೈದ್ಯರ ನೇಮಕ, ಆಸ್ಪತ್ರೆಯಲ್ಲಿ ಕಂಪ್ಯೂಟರ್ ರೇಡಿಯೋ ಗ್ರಫಿ ಬಳಸಬೇಕು. ಎಕ್ಸರೇ ಕೇಂದ್ರವು 24/7 ಸೇವೆ ದೊರೆಯಬೇಕು. ಐಸಿಯುಗೆ ವಿಶೇಷ ವೈದ್ಯರನ್ನು ನೇಮಿಸಬೇಕು. ಬಸವಣ್ಣ ಕಾಲುವೆಯಲ್ಲಿ ಏಳು ಭ್ರೂಣಗಳು ಪತ್ತೆಯಾಗಿದ್ದು, ಅವುಗಳ ತನಿಖೆಯಾಗಬೇಕು. ಕೆಟ್ಟಿರುವ ಸಿಬಿಸಿ ಯಂತ್ರವನ್ನು ಸುಸ್ಥಿತಿಗೊಳಿಸಬೇಕು. ನಗರದಲ್ಲಿ ಪುನೀತ್‌ರಾಜಕುಮಾರ ಹೆಸರಲ್ಲಿ ಹೃದಯರೋಗ ಆಸ್ಪತ್ರೆ ತೆರೆಯಬೇಕು. ನಗರದಲ್ಲಿ ಹೆಚ್ಚಿದ ಜನಸಂಖ್ಯೆಗನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆದು ವೈದ್ಯರನ್ನು ನೇಮಿಸಬೇಕು. ಆಸ್ಪತ್ರೆಗೆ ಬರುವ ರೋಗಿಗಳಿಗೆ ಸಿಬ್ಬಂದಿ ತಾಳ್ಮೆಯಿಂದ ಮಾತನಾಡಿ, ವ್ಹೀಲ್ ಚೇರ್ ವ್ಯವಸ್ಥೆ ಕಲ್ಪಿಸುವ ವ್ಯವಸ್ಥೆಯಾಗಬೇಕು. ಖಾಸಗಿ ಆಸ್ಪತ್ರೆಗಳಲ್ಲು ಚಿಕಿತ್ಸಾ ದರಗಳನ್ನು ಸಾರ್ವಜನಿಕರಿಗೆ ಕಾಣುವಂತೆ ಫಲಕಗಳನ್ನು ಹಾಕಬೇಕು. ತ್ರೈಮಾಸಿಕ ಸಭೆಗಳ ಜೊತೆಯಲ್ಲೇ ಸಂಘಟನೆಗಳ ಪದಾಧಿಕಾರಿಗಳೊಂದಿಗೆ ಸಭೆ ನಡೆಸಬೇಕು ಎಂದು ಆಗ್ರಹಿಸಿದರು.

ಅಧ್ಯಕ್ಷ ವಿ.ಸ್ವಾಮಿತಿ, ಬಂಡೆ ತಿರುಕಪ್ಪ, ಎಂ.ಗೋಪಾಲ, ಅಲ್ತಾಫ್, ದಿವಾಕರ, ಎನ್.ಯಲ್ಲಾಲಿಂಗ, ಉಮಾ ಮಹೇಶ್ವರ ರಾವ್, ಭಾಸ್ಕರರೆಡ್ಡಿ ಇತರರು ಇದ್ದರು.




# ಮೃತ ಮಾಜಿ ಪ್ರಧಾನಿ ಡಾ. ಮನಮೋಹನ ಸಿಂಗ್‌ಗೆ ಪ್ರಧಾನಿ, ಸಿಎಂ ಅಂತಿಮ ಪುಷ್ಪ ನಮನ



ಪ್ರಧಾನಿ ನರೇಂದ್ರ ಮೋದಿ ಅವರು ನಿಧನರಾದ ಡಾ. ಮನಮೋಹನ ಸಿಂಗ್ ಅವರಿಗೆ ಅಂತಿಮ ಪುಷ್ಪ ನಮನ ಸಲ್ಲಿಸಿದರು.




ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿಧನರಾದ ಡಾ. ಮನಮೋಹನ ಸಿಂಗ್ ಅವರಿಗೆ ಅಂತಿಮ ಪುಷ್ಪ ನಮನ ಸಲ್ಲಿಸಿದರು.



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

-: ಸಂಪಾದಕರು :-
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಹೆಣ್ಣು ಮಕ್ಕಳ ದೇಹ ಪವಿತ್ರವಾದ ಗರ್ಭಗುಡಿಯಂತೆ... ಮನಸ್ಸು ದೇವರ ವಿಗ್ರಹದಂತೆ. ಗರ್ಭಗುಡಿಯನ್ನು ಪ್ರವೇಶಿಸಲು ಎಲ್ಲರಿಗೂ ಅನುಮತಿ ಇರುವುದಿಲ್ಲ ಅಲ್ಲವೇ?...ಇರಬಾರದು ಕೂಡ. ಅಂತೆಯೇ ನಿಮ್ಮ ದೇಹವೆಂಬ ಗರ್ಭಗುಡಿಯಲ್ಲಿ ಮನಸ್ಸೆಂಬ ವಿಗ್ರಹವನ್ನು ಯಾರ್ಯಾರೋ ಮುಟ್ಟಿ ಮಲಿನಗೊಳಿಸಬಾರದು ಎಂಬ ಎಚ್ಚರ ನಿನಗಿರಲಿ....

# ಹರೆಯದ ಹೆಣ್ಣು ಮಕ್ಕಳಿಗೆ ದೊಡ್ಡಮ್ಮನ ಪತ್ರ



ಪ್ರೀತಿಯ ಪುಟ್ಟಿ,

ಹೇಗಿದ್ದೀಯಾ? ನೀನು ಬಿಡು ಹಾಡಿ, ಕುಣಿದು, ನಲಿದಾಡಿಕೊಂಡು ಓಡಾಡುತ್ತೀಯ... ನಿನ್ನ ವಯಸ್ಸೆ ಹಾಗೆ ಅಲ್ವಾ.ನಾವೂ ನಿನ್ನ ಹಾಗೆ ಇದ್ವಿ ಅಂತ ಹೇಳಿದ್ರೆ ಖಂಡಿತವಾಗಿಯೂ ನಿನಗೆ ನಂಬಿಕೆ ಬರಲ್ಲ. ಇರ್ಲಿ ಬಿಡು. ನಿನ್ನನ್ನು ನಂಬಿಸಿ ಏನು ಮಾಡಲಿ.

ನಿನ್ನೆ ನಿನ್ನ ಅಮ್ಮ ನನಗೆ ಕರೆ ಮಾಡಿ ನಿನ್ನ ಜೊತೆ ಸ್ವಲ್ಪ ಮಾತಾಡು ಅಂತ ಹೇಳಿದ್ಲು. ಅದೇನೋ ನೀನು ಫ್ರೆಂಡ್ಸ್ ಜೊತೆ ನ್ಯೂ ಇಯರ್ ಪಾರ್ಟಿಗೆ ಹೋಗ್ಬೇಕು ಅಂತ ಹಠ ಮಾಡ್ತಾ ಇದ್ದೀಯಾ ಅಂತ.

ನಿಜ...ಬದುಕಿನ ಈ ಘಟ್ಟದಲ್ಲಿ ನಿನಗೆ ಕಣ್ಣಿಗೆ ಕಂಡದ್ದೆಲ್ಲವೂ ಬಣ್ಣ ಬಣ್ಣವಾಗಿ ತೋರುತ್ತದೆ. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ... ನದಿಯಾಚೆಗೆ ಎಲ್ಲವೂ ಹಸಿರು ಎಂದು ನಿನಗನ್ನಿಸಿದರೆ ಅದು ನಿನ್ನ ತಪ್ಪಲ್ಲ.. ನಿನ್ನ ವಯಸ್ಸಿನದು. ಕಣ್ಣಿಗೆ ಕಂಡದ್ದನ್ನೆಲ್ಲ ಕೊಳ್ಳುವ ಬಯಕೆ, ಮನೆಯಲ್ಲಿ ಮಾಡಿದ ಪೌಷ್ಟಿಕ ಆಹಾರಕ್ಕಿಂತ ಹೊರಗಿನ ತಿನಿಸುಗಳ ಮೇಲೆ ಹೆಚ್ಚಿನ ಆಸಕ್ತಿ, ನನಗೆ ಬೇಕಾದಂತೆ ನಾನು ಇರಬೇಕು ಎಂಬ ಆಸೆ, ಹರೆಯಕ್ಕೆ ಬಂದಿದ್ದೇನೆ ಎಂಬ ಭಾವದಲ್ಲಿ ನನಗೆ ಸ್ವತಂತ್ರ ಬೇಡವೇ ಎಂಬ ಆಕ್ರೋಶ ಎಲ್ಲವೂ ಈ ವಯಸ್ಸಿನಲ್ಲಿ ಸಹಜ.

ಆದರೆ ಬದುಕು ಇದೆಲ್ಲದಕ್ಕಿಂತಲೂ ದೊಡ್ಡದು ಪುಟ್ಟಿ. ಕಾಲ ಅದೆಷ್ಟೇ ಮುಂದುವರಿದರೂ ಹೆಣ್ಣು ಮಕ್ಕಳ ಸುರಕ್ಷತೆಯ ದೃಷ್ಟಿಯಲ್ಲಿ ನೋಡುವುದಾದರೆ ನಮ್ಮ ಹುಷಾರಿನಲ್ಲಿ ನಾವಿರಬೇಕು.

ತನ್ನ ಪ್ರೀತಿಯ ಬಲೆಯಲ್ಲಿ ಸಿಲುಕಿದ ಪುಟ್ಟ ಯುವತಿಯನ್ನು ವೇಶ್ಯಾವಾಟಿಕೆಗೆ ಮಾರಿದವರು ಯಾವುದೇ ಸಾಕ್ಷಿ ಇಲ್ಲದೆ ಹೊರಗೆ ತಿರುಗುತ್ತಿದ್ದಾರೆ. ತಮ್ಮೊಂದಿಗೆ ಓದುತ್ತಿದ್ದ ಯುವತಿಯನ್ನು ಬರ್ಬರವಾಗಿ ಅತ್ಯಾಚಾರ ಮಾಡಿ ಕೊಲೆ ಮಾಡಿ ಸುಟ್ಟು ಹಾಕಿದ ಘಟನೆಗಳು ನಮ್ಮ ಕಣ್ಣ ಮುಂದಿವೆ. ಇದೆಲ್ಲಕ್ಕಿಂತಲೂ ಮಿಗಿಲಾಗಿ ಅರಿಯದ ಮುಗ್ಧ ವಯಸ್ಸಿನಲ್ಲಿ ತನ್ನನ್ನು ಪ್ರೀತಿಸಿದ ಬಾಲೆಯ ಕೈಗೊಂದು ಮಗುವನ್ನು ಕೊಟ್ಟು ಆಕೆಯ ಭವಿಷ್ಯವನ್ನು ಗಾಢ ಅಂಧಕಾರದಲ್ಲಿ ಮುಳುಗಿಸಿದ ಮುಗ್ಧ ಬಾಲಕರೂ ಇದ್ದಾರೆ. ಗಂಡು-ಹೆಣ್ಣು ಸಮಾನರು ನಿಜ..ಆದರೆ ಗಂಡು ಹೆಣ್ಣಿನ ನಡುವಿನ ಆಕರ್ಷಣೆಗೆ ಬಲಿಯಾಗುವುದು ಹೆಣ್ಣೇ.

9ನೇ ತರಗತಿ ಓದುತ್ತಿರುವ ಆ ಪುಟ್ಟ ಬಾಲೆಯನ್ನು ಆಸ್ಪತ್ರೆಗೆ ಕರೆ ತಂದ ಪಾಲಕರಿಗೆ ಆಘಾತ ಕಾದಿತ್ತು... ಇನ್ನು ಎಳಸುತನ ಮಾಸಿರದ ಆ ಪುಟ್ಟ ಬಾಲಕಿ ತಾಯಿಯಾಗಲಿದ್ದಳು. ಅಬಾರ್ಷನ್ ಮಾಡಿಸಲು ಸಮಯ ಮೀರಿ ಹೋಗಿತ್ತು. ಈ ವಿಷಯ ಆಕೆಯನ್ನು ತಪಾಸಣೆ ಮಾಡಿದ ವೈದ್ಯರ ಮೂಲಕ ಕಾನೂನು ತಜ್ಞರ ಬಳಿ ಬಂದಾಗ ಆಕೆಯ ಈ ಸ್ಥಿತಿಗೆ ಕಾರಣವಾದ ಯುವಕನ ಮೇಲೆ ಪೊಲೀಸ್ ಸ್ಟೇಷನ್ನಲ್ಲಿ ಕೇಸನ್ನು ದಾಖಲಿಸಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಕರೆ ತಂದರು. ತನ್ನನ್ನು ಯಾವ ಕಾರಣಕ್ಕೆ ಕರೆತರಲಾಗಿದೆ ಎಂಬುದನ್ನು ಕೂಡ ಅರಿಯದ ಆ ಬಾಲಕ ಚಡಪಡಿಸುತ್ತಿದ್ದು ನನ್ನನ್ನು ಯಾವಾಗ ಕಳುಹಿಸಿ ಕೊಡುತ್ತೀರಿ ಎಂದು ವಕೀಲರನ್ನು ಕೇಳುತ್ತಿದ್ದ. ಪೋಕ್ಸೋ ಕಾಯ್ದೆಯ ಕುರಿತು ನಿನಗೆ ಗೊತ್ತಿರಬಹುದು... ಪ್ರೊಟೆಕ್ಷನ್ ಆಫ್ ಚಿಲ್ಡ್ರನ್ ಫ್ರಮ್ ಸೆಕ್ಷುಯಲ್ ಅಫೆನ್ಸಸ್. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವ ಈ ಕಾಯ್ದೆಯ ಅಡಿಯಲ್ಲಿ ಅವರಿಬ್ಬರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು.

ಲೈಂಗಿಕತೆ ಎಂದರೇನು? ಎಂದೇ ಅರಿವಿಲ್ಲದ ಆ ಮಕ್ಕಳು ಈ ಅಪರಾಧಕ್ಕೆ ಗುರಿಯಾಗಿದ್ದು ಶಿಕ್ಷೆಯನ್ನು ಮಾತ್ರ ಆ ಬಾಲಕಿ ಅನುಭವಿಸುತ್ತಿದ್ದಳು. ಅರಿಯದ ವಯಸ್ಸಿನ ಹರೆಯದ ಹುಮ್ಮಸ್ಸಿನಲ್ಲಿ ಜರುಗಿದ ಪ್ರಮಾದ ಅವರಿಬ್ಬರ ಬದುಕನ್ನು ಬಲಿ ತೆಗೆದುಕೊಂಡಿತ್ತು..... ಆಕೆಯ ಮುಂದಿನ ಬದುಕು ಅಂಧಕಾರದ ತೊಟ್ಟಿಲಲ್ಲಿ ತೂಗುತ್ತಿತ್ತು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಒಳ್ಳೆಯ ಮತ್ತು ಕೆಟ್ಟ ಸ್ಪರ್ಶಗಳ ಕುರಿತು ನಿನಗೆ ಅರಿವಿದ್ದರೆ ಸಾಲದು... ಅಂತಹ ಸಂದರ್ಭಗಳು ನಿನಗೆ ಒದಗದಂತೆ ನಿನ್ನ ಪಾಲಕರ ರಕ್ಷಾ ಕವಚ ನಿನ್ನ ಮೇಲಿರುವುದು ನಿನ್ನ ಸ್ವಾತಂತ್ರ್ಯಕ್ಕೆ ಅಡ್ಡಿ ಎಂದು ನಿನಗನ್ನಿಸಿದರೆ ಅದು ನಿನ್ನ ತಪ್ಪಲ್ಲ.

ಹೆಣ್ಣು ಮಕ್ಕಳ ದೇಹ ಪವಿತ್ರವಾದ ಗರ್ಭಗುಡಿಯಂತೆ... ಮನಸ್ಸು ದೇವರ ವಿಗ್ರಹದಂತೆ. ಗರ್ಭಗುಡಿಯನ್ನು ಪ್ರವೇಶಿಸಲು ಎಲ್ಲರಿಗೂ ಅನುಮತಿ ಇರುವುದಿಲ್ಲ ಅಲ್ಲವೇ?... ಇರಬಾರದು ಕೂಡ. ಅಂತೆಯೇ ನಿಮ್ಮ ದೇಹವೆಂಬ ಗರ್ಭಗುಡಿಯಲ್ಲಿ ಮನಸ್ಸೆಂಬ ವಿಗ್ರಹವನ್ನು ಯಾರ್ಯಾರೋ ಮುಟ್ಟಿ ಮಲಿನಗೊಳಿಸಬಾರದು ಎಂಬ ಎಚ್ಚರ ನಿನಗಿರಲಿ.

ಅಯ್ಯೋ ಆಂಟಿ!.. ಫ್ರೆಂಡ್ಸ್ ಜೊತೆ ಹೊರಗಡೆ ಹೋಗಿ ಸೆಲಬ್ರೇಟ್ ಮಾಡ್ತೀನಿ ಅಂದ್ರೆ ಇಷ್ಟೆಲ್ಲಾ ಹೇಳ್ತೀರಾ ಅಂತ ನಿನಗೆ ಅನ್ನಿಸಬಹುದು.. ನಿಜ ಯು ಆರ್ ನಾಟ್ ರಾಂಗ್?

ಚಿಕ್ಕವಳಿದ್ದಾಗ ನಿನ್ನನ್ನು ಪಾರ್ಕ್ ನಲ್ಲಿ ಆಟ ಆಡಲು ಬಿಟ್ಟುನಿನ್ನಮ್ಮಸ್ನೇಹಿತರೊಂದಿಗೆ ಹರಟೆ ಹೊಡೆಯುತ್ತಾ ಕೂತಾಗ ಕೂಡ ಅದೆಷ್ಟೇ ಆಟದಲ್ಲಿ ನೀನು ಮಗ್ನಳಾಗಿದ್ದರೂ ಅರೆಕ್ಷಣ ಒಬ್ಬರನ್ನೊಬ್ಬರು ಕಾಣದೆ ಹೋದಾಗ ಪರಿತಪಿಸುತ್ತೀರಿ. ಅಮ್ಮನ ಕಣ್ಣ ನಿಲುಕಿನಲ್ಲಿ ಇರಬೇಕೆಂದು ಬಯಸುತ್ತಿದ್ದ ನೀನು ಇದೀಗ ಅಮ್ಮನಿಂದ ದೂರವಾಗಿ ಸ್ವತಂತ್ರವಾಗಿ ಹೋಗಬೇಕೆಂದು ಬಯಸುತ್ತಿರುವುದು ಎಷ್ಟರಮಟ್ಟಿಗೆ ಸರಿ... ಸ್ವಾತಂತ್ರ್ಯಕ್ಕೂ ಸ್ವೇಚ್ಛೆಗೂ ಬಹಳ ವ್ಯತ್ಯಾಸವಿದೆ. ಸಮಾಜ ಒಪ್ಪುವ ರೀತಿಯಲ್ಲಿ ನನ್ನಿಷ್ಟದ ಬದುಕನ್ನು ಕಟ್ಟಿಕೊಳ್ಳುವ ಸ್ವಾತಂತ್ರ್ಯಕ್ಕೂ, 'ನನ್ನ ಜೀವನ ನನ್ನ ಹಕ್ಕು' ಎಂದು ಬೇಕುಬೇಕಾದಂತೆ ಬದುಕುವ ಸ್ವೇಚ್ಛೆಗೂ ಬಹಳಷ್ಟು ವ್ಯತ್ಯಾಸವಿದೆ.

ಸ್ವಚ್ಛಂದವಾಗಿ ಆಕಾಶದಲ್ಲಿ ಹಾರಾಡುವ ಗಾಳಿಪಟಕ್ಕೆ ಕಣ್ಣಿಗೆ ಕಾಣಿಸದ ಒಂದು ತೆಳುವಾದ ದಾರದ ಎಳೆ (ಸೂತ್ರ) ಮತ್ತು ಬಾಲಂಗೋಚಿಗಳು ರಕ್ಷಾ ಕವಚದಂತೆ ಕಾಯುತ್ತವೆ. ಕೇವಲ ಕಾಗದ ಮತ್ತು ಕಡ್ಡಿಗಳ ಸಹಾಯದಿಂದ ತಯಾರಿಸುವ ಒಂದು ಪುಟ್ಟ ಗಾಳಿಪಟಕ್ಕೆ ಅಷ್ಟೆಲ್ಲ ರಕ್ಷಣೆ ನೀಡುವ ನಾವು ಅರಿಯದ ನಮ್ಮ ಪುಟ್ಟ ಕಂದಮ್ಮಗಳ ಕುರಿತು ಕಳವಳಿಸಬಾರದೇ? ಹೇಳು.

ಅಷ್ಟಕ್ಕೂ ಹೋಗಲೇಬೇಕೆಂದಿದ್ದರೆ... ನಿನ್ನಪ್ಪ ಅಮ್ಮನನ್ನು ಒಪ್ಪಿಸಿ ಸರಿಯಾದ ಮತ್ತು ಸುರಕ್ಷಿತವಾದ, ನಗರದ ಒಳ ವಲಯದಲ್ಲಿ, ಮನೆಗೆ ಅತ್ಯಂತ ಹತ್ತಿರದಲ್ಲಿರುವ ಪೊಲೀಸ್ ಇಲಾಖೆಯ ನಿಗರಾಣಿಯಲ್ಲಿರುವ ಪಾರ್ಟಿ ಹಾಲ್ಗಳಲ್ಲಿ ಅಧಿಕೃತವಾಗಿ ಆಯೋಜಿಸ ಲಾಗುವ ಕಾರ್ಯಕ್ರಮದಲ್ಲಿ ಭಾಗಿಯಾಗು ( ಸಾಧ್ಯವಾದರೆ ಪಾಲಕರನ್ನು ಕರೆದುಕೊಂಡು )

ನಿನ್ನ ಈ ವಯಸ್ಸಿನಲ್ಲಿ ನೀನು ಓದು, ವಿದ್ಯಾಭ್ಯಾಸದ ಕಡೆ ಗಮನ ಕೊಡು. ಒಳ್ಳೆಯ ವಿದ್ಯಾಭ್ಯಾಸ ನಿನ್ನ ಬದುಕಿನ ಗುರಿಗಳನ್ನು ತಲುಪಲು ನಿನಗೆ ಸಹಾಯಕ. ಯೌವನದ ಕೆಲ ವರುಷಗಳು ನಿನ್ನ ಮನಸ್ಸಿನ ಹತೋಟಿ ತಪ್ಪಿ ನೀನು ನಡೆದರೆ ಅದಕ್ಕೆ ಜೀವನವಿಡಿ ತಪ್ಪುಕಂದಾಯ ಕಟ್ಟಬೇಕಾದಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ.

ತಮ್ಮ ಕುಟುಂಬಗಳಿಂದ ಮನೆಯಿಂದ ಸಾಕಷ್ಟು ದೂರದಲ್ಲಿರುವ ಬೇರೆಯವರ ಸ್ವಚ್ಛಂದ ಜೀವನಗಳನ್ನು ನೋಡಿ ಭ್ರಮೆಗೆ ಒಳಗಾಗಬೇಡ.... ಅವರ ಪಾಲಕರಿಗೂ ಕೂಡ ಈ ವಿಷಯ ಗೊತ್ತಿರುವುದಿಲ್ಲ. ಗೊತ್ತಿದ್ದರೆ ಅವರು ಕೂಡ ತಮ್ಮ ಮಕ್ಕಳನ್ನು ಬಿಡುವುದಿಲ್ಲ.

ಸರಿಯಾದ ಹಾದಿಯಲ್ಲಿ ಸಾಗಲು ಬಹಳಷ್ಟು ಧೈರ್ಯ ಬೇಕು..ತಪ್ಪು ಹಾದಿಗಳಲ್ಲಿ ಇರುವಷ್ಟು ಆಕರ್ಷಣೆ ಒಳ್ಳೆಯ ಹಾದಿಯಲ್ಲಿ ಇರುವುದಿಲ್ಲ. ಆಯ್ಕೆ ನಿನಗೆ ಬಿಟ್ಟದ್ದು. ನನ್ನ ಮಾತುಗಳ ಹಿಂದಿನ ಕಾಳಜಿ, ನಿನ್ನ ತಾಯಿಯ ಕಳಕಳಿ ನಿನಗೆ ಅರಿವಾದಲ್ಲಿ ನಾನು ಈ ಪತ್ರ ಬರೆದದ್ದಕ್ಕೂ ಸಾರ್ಥಕ.

ಇಂತಿ ನಿನ್ನ ಪ್ರೀತಿಯ ದೊಡ್ಡಮ್ಮ.

# ಅನುಭವಗಳ ಬುತ್ತಿಗಂಟು ಬಿಚ್ಚಿಡುವ ಮಲ್ಲಿಗೆನಾಡು


ಬದುಕು ಬಂದಂತೆ ಅನುಭವಿಸುವುದು ಸುಲಭ. ಆದರೆ ಇಚ್ಛೆಯಂತೆ ಬದುಕು ಕಟ್ಟಿಕೊಳ್ಳುವುದು ಕಷ್ಟದ ಕೆಲಸ. ಹಾಗೆ ಇಚ್ಛೆಯಂತೆ ಕಟ್ಟಿಕೊಂಡ ಬದುಕು ಇತರರಿಗೂ ಬೆಳಕಾಗಬೇಕು ಎಂದು ಹಂಬಲಿಸುವವರು ತುಂಬಾ ವಿರಳ. ಅಂತಹ ವಿರಳಾತಿವಿರಳರಲ್ಲಿ ಶ್ರೀ ನಾಗಪ್ಪ ತಳಕಲ್ ಅವರೂ ಒಬ್ಬರು. ಬಾಲ್ಯದಿಂದ ವೃದ್ಯಾಪ್ಯದವರೆಗೆ ತಾವು ಕಂಡುಂಡ ಬದುಕಿನ ಬವಣೆಗಳು, ರಸ ಘಳಿಗೆಗಳಿಗೆ ನಾಗಪ್ಪ ತಳಕಲ್ ಅವರು ಅಕ್ಷರ ರೂಪ ನೀಡಿದ್ದಾರೆ. ಅದನ್ನು ಒಂದು ಸುಂದರ ಮಲ್ಲಿಗೆಯ ಹಾರವನ್ನಾಗಿಸಿದ್ದಾರೆ. ಆ ಮಲ್ಲಿಗೆ ಹಾರದ ಕಂಪು ಈಗ ಎಲ್ಲೆಡೆ ಪರಿಮಳ ಬೀರುತ್ತಿದೆ. ಆ ಪರಿಮಳ ಭರಿತ ಹಾರದ ಹೆಸರೇ 'ಮಲ್ಲಿಗೆನಾಡು'.


ಶ್ರೀಯುತ ನಾಗಪ್ಪ ತಳಕಲ್ ಅವರು ಮೂಲತಃ ಹೂವಿನ ಹಡಗಲಿಯವರು. ವೃತ್ತಿಯಲ್ಲಿ ಅಭಿಯಂತರರಾಗಿ ಭದ್ರಾ ವತಿಯ ಕಾಗದ ಮತ್ತು ಉಕ್ಕು ಕಾರ್ಖಾನೆಯಲ್ಲಿ ಸೇವೆಸಲ್ಲಿಸಿ ನಿವೃತ್ತರಾಗಿ, ಈಗ ದಾವಣಗೆರೆ ಯಲ್ಲಿ ವಾಸವಾ ಗಿದ್ದಾರೆ. ಸಾಮಾನ್ಯವಾಗಿ ಇಂಜಿನಿಯ ರಿಂಗ್ ಆದವರಿಗೆ ಸಾಹಿತ್ಯದ ಲಾಲಿತ್ಯ ಕಡಿಮೆ ಎನ್ನಬಹುದು. ಆದರೆ ಇದಕ್ಕೆ ಅಪವಾದ ವೆಂಬಂತೆ ಅಲ್ಲಲ್ಲಿ ಕೆಲ ಇಂಜಿನಿಯರ್‌ಗಳು ಸಾಹಿತ್ಯದಲ್ಲಿ ತೊಡಗಿಸಿ ಕೊಂಡಿದ್ದಾರೆ. ಹಾಗೆ ತೊಡಗಿಸಿಕೊಂಡವರ ಸಾಹಿತ್ಯಕ್ಕೊಂದು ವಿಭಿನ್ನ ಆಂಯಾಮವಿರುತ್ತದೆ. ಏಕೆಂದರೆ ಅವರು ಪ್ರತಿಯೊಂದು ಘಟನೆಯನ್ನು 3'ಡಿ ಆಯಾಮದಲ್ಲಿ ತೋರಿಸುವ ಪ್ರಯತ್ನ ಮಾಡಿರುತ್ತಾರೆ. ಅಂತಹ 3'ಡಿ ಆಯಾಮವನ್ನು ನಾಗಪ್ಪ ತಳಕಲ್ ಅವರ ಸಾಹಿತ್ಯದಲ್ಲೂ ಕಾಣಬಹುದು.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper



ಪ್ರಸ್ತುತ ಅವರು ಬರೆದ 'ಮಲ್ಲಿಗೆನಾಡು' ಕೃತಿಯು ಒಂದು ವಿಭಿನ್ನ ಶೈಲಿಯ ಕೃತಿಯಾಗಿದೆ. ಇದರಲ್ಲಿ ಭೂತ, ಭವಿಷ್ಯ ಹಾಗೂ ವರ್ತಮಾನದ ಘಟನೆಗಳಿವೆ. ಇದು ಪುರಾತನ ಇತಿಹಾಸ ತಿಳಿಸುವ ಐತಿಹಾಸಿಕ ಕೃತಿಯೂ ಹೌದು, ವರ್ತಮಾನವನ್ನು ತಿಳಿಸುವ ಪ್ರಚಲಿತ ಕೃತಿಯೂ ಹೌದು, ಭಾವನಾತ್ಮಕತೆಯೊಂದಿಗೆ ಭವಿಷ್ಯವನ್ನು ತಳುಕುಹಾಕಿದ ಕೃತಿಯೂ ಹೌದು. ಈ ಕೃತಿಯಲ್ಲಿ ಪ್ರೇಮ ಇದೆ, ಕಾಮ ಇದೆ, ಸ್ನೇಹದ ಸಾಂಗತ್ಯ ಇದೆ, ಭಾಂದವ್ಯದ ಬೆಸುಗೆ ಇದೆ, ಮಮತೆ ಇದೆ, ತುಡಿತ ಇದೆ, ಮಿಡಿತ ಇದೆ. ಹೀಗೆ ವಿವಿಧ ಸಂಗಮಗಳ ಸಂಮಿಶ್ರಣ ಈ ಮಲ್ಲಿಗೆನಾಡು.

ಆಯಾ ಕಾಲಘಟ್ಟದ ಆಚರಣೆಗಳು, ವಿಚಾರಗಳು, ಜನರ ಆಶೋತ್ತರಗಳನ್ನು ಸಂಕ್ಷೇಪಿಸಿ, ಸಂಶ್ಲೇಷಿಸಿ ಮುಂದಿನ ಜನಾಂಗಕ್ಕೆ ಕೊಂಡೊಯ್ಯುವ ಪ್ರಯತ್ನದಲ್ಲಿ ಶ್ರೀಯುತ ನಾಗಪ್ಪ ತಳಕಲ್ ಅವರು ಯಶಸ್ವಿಯಾಗಿದ್ದಾರೆ. ಪ್ರಸ್ತುತ 'ಮಲ್ಲಿಗೆನಾಡು' ಪುಸ್ತಕದಲ್ಲಿ 30 ಲೇಖನಗಳಿವೆ. ಒಂದೊಂದು ಲೇಖನವು ವೈವಿಧ್ಯಮಯವಾದ ಆಂತರಿಕ ಅಭಿವ್ಯಕ್ತಿಯನ್ನು ಹೊಂದಿದೆ. ಹೂವಿನ ಹಡಗಲಿ ಇತಿಹಾಸದಿಂದ ಪ್ರಾರಂಭವಾಗಿ ಎಂ.ಪಿ.ಪ್ರಕಾಶರವರೆಗಿನ ಕೆಲವು ಮಹತ್ವದ ಘಟನೆಗಳನ್ನು ದುಷ್ಟಾಂತಗಳನ್ನು, ವಿಚಾರಗಳನ್ನು ಸೇರಿಸಿ ಸುಂದರವಾದ ಹಾರವನ್ನಾಗಿಸಿದ್ದಾರೆ.

ಇದರಲ್ಲಿ ನನಗೆ ವೈಯಕ್ತಿಕವಾಗಿ 'ಗ್ರಾಮ್ ಫೋನ್ ಎಂಬ ಮಾಯಾಪೆಟ್ಟಿಗೆ', 'ಹುಲುಸು ವೀರನ ಕತೆ', 'ವಿಜಯನಗರದ ವೀರಭದ್ರ', 'ಗಂಗಾ', 'ಬಲಿ' ಮತ್ತು 'ನಾವೆತ್ತ ಸಾಗಿದ್ದೇವೆ' ಎಂಬ ಲೇಖನಗಳು ಹೆಚ್ಚು ಮೆಚ್ಚುಗೆಯಾದವು. 'ಸಾಮಾಜಿಕ ಜನಜೀವನ' ಲೇಖನದಲ್ಲಿ ಆಗಿನ ಕಾಲದ ಬಹುದೊಡ್ಡ ಚಟವಾಗಿದ್ದ ಬೀಡಿ ಚಟ ಹೇಗಿತ್ತು, ಅದನ್ನು ಹೇಗೆ ಅನುಭವಿಸುತ್ತಿದ್ದರು ಎಂಬುದನ್ನು ಕಣ್ಣಿಗೆ ಕಟ್ಟುವಂತೆ ತಿಳಿಸಿದ್ದಾರೆ. ಗ್ರಾಮ್ ಫೋನ್ ಎಂಬ ಮಾಯಾಪೆಟ್ಟಿಗೆ ಲೇಖನದಲ್ಲಿ ಗ್ರಾಮ್‌ಫೋನ್ ಲೇಖಕರಿಗೆ ಎಷ್ಟು ಇಷ್ಟವಾಗಿತ್ತು ಮತ್ತು ಅದು ಇತರರನ್ನು ಹೇಗೆ ಆಕರ್ಷಿಸಿತ್ತು ಎಂಬುದನ್ನು ರಸವತ್ತಾಗಿ ಹೇಳುತ್ತಾ, ಚಾಂದಿನಿ ಎಂಬ ಹೋಟೆಲ್ ಚೆಲುವೆ ಹೇಗೆ ಗಿರಾಕಿಗಳಿಗೆ ಆಕರ್ಷಣೆಯಾಗಿದ್ದಳು ಎಂಬುದನ್ನು ಆಗಿನ ಕಾಲದ ವೇಶ್ಯೆಯರಿಗಿದ್ದ ನೆಲೆ-ಬೆಲೆಗಳನ್ನು ತಿಳಿಸಿದ್ದಾರೆ. ಈ ಲೇಖನ ಆಗಿನ ಕಾಲಘಟ್ಟದ ಕನ್ನಡಿಯಾಗಿದೆ. ಹುಲುಸು ವೀರನ ಕತೆ ಓದುತ್ತಿದ್ದರೆ ಒಂದು ಕ್ಷಣ ಕಾಟೀರ ಚಿತ್ರದ ದೃಶ್ಯಗಳು ಕಣ್ಣ ಮುಂದೆ ಬಂದಂತೆ ಭಾಸವಾಗುತ್ತದೆ. ಆದರೆ ಇಲ್ಲಿನ ಹುಲುಸು ವೀರನ ಅಂತ್ಯ ಮಾತ್ರ ಕಣ್ಣೀರು ತರಿಸುತ್ತದೆ.

ವಿಜಯನಗರದ ವೀರಭದ್ರ, ಗಂಗಾ ಮತ್ತು ಬಲಿ ಲೇಖನಗಳು ಕಾಲ್ಪನಿಕ ಕತೆಯಾದರೂ ಕೆಲವು ಸ್ಥಳಗಳೊಂದಿಗೆ ತಳುಕು ಹಾಕಿಕೊಂಡಿರುವುದರಿಂದ ನೈಜತೆ ಪಡೆದುಕೊಂಡಿವೆ. ಓದುಗರ ಅವಧಾನವನ್ನು ಹಿಡಿದು ನಿಲ್ಲಿಸುತ್ತವೆ. ನಾವೆತ್ತ ಸಾಗುತ್ತಿದ್ದೇವೆ ಲೇಖನದ ಮೂಲಕ ಇಂದಿನ ಸಮಾಜಕ್ಕೆ ಮಹತ್ತರವಾದ ಸಂದೇಶವನ್ನು ಕೊಡುವ ಪ್ರಯತ್ನ ಮಾಡಿದ್ದಾರೆ. ಇಂದಿನ ಪಾಲಕರ ಆಶೋತ್ತರಗಳು ಮತ್ತು ಯುವಪೀಳಿಗೆಯ ಭಾವನೆಗಳು ನಡುವಿನ ಕೊಂಡಿಯು ಕಳಚಿದ್ದರ ಪರಿಣಾಮವಾಗಿ ನಾವೆತ್ತ ಸಾಗುತ್ತಿದ್ದೇವೆ ಎಂಬುದನ್ನು ತಿಳಿಸುತ್ತಾ, ಸಮಸಮಾಜ ನಿರ್ಮಾಣಕ್ಕೆ ನಮ್ಮೆಲ್ಲರ ಕಾಣಿಕೆ ಏನಾಗಿರಬೇಕು ಎಂಬುದನ್ನು ತಿಳಿಸುತ್ತಾರೆ.

ಇಳಿ ವಯಸ್ಸಿನಲ್ಲೂ ಕುಂದದ ನಾಗಪ್ಪ ಅವರ ಸಾಹಿತ್ಯ ಪ್ರೇಮಕ್ಕೆ ಮತ್ತು ಪದಗಳ ನರ್ತನಕ್ಕೆ ಸೋಲದವರಿಲ್ಲ. ಈಗಾಗಲೇ ಮಹಾಭಾರತ ಕಥಾಮಂಜರಿ ಎಂಬ ಕೃತಿಯ ಮೂಲಕ ಕನ್ನಡ ಸಾಹಿತ್ಯಕ್ಕೆ ಪಾದಾರ್ಪಣೆ ಮಾಡಿರುವ ನಾಗಪ್ಪ ತಳಕಲ್ ಅವರು ಈ ಕೃತಿಯ ಮೂಲಕ ಐತಿಹಾಸಿಕ ಕುರುಹುಗಳನ್ನು ಹೇಳುವ ಇತಿಹಾಸಕಾರರಾಗಿ, ಭಾವನಾತ್ಮಕ ಕಥನಕಾರರಾಗಿ ಸಾಹಿತ್ಯಾಸಕ್ತರ ಮನದಲ್ಲಿ ನೆಲೆಸಲಿದ್ದಾರೆ. ಅವರಿಂದ ಇನ್ನಷ್ಟು ಅಮೂಲ್ಯ ಕೃತಿಗಳು ಹೊರಬರಲಿ ಎಂದು ಆಶಿಸುತ್ತೇನೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಮಾತು

ಮಾತು ಮನಸಿನ ದರ್ಪಣ
ನುಡಿಯಿರಲಿ ದೇವರಿಗೆ ಸಮರ್ಪಣ
ತೂಗಿ ಆಡುವ ನುಡಿಗಳ
ತೂಕವಿರಲಿ ಬಳಸುವ ಪದಗಳ

ಆಡದಿರಿ ಹಗುರ ಮಾತು
ಮಾಡದಿರಿ ಮನಸಿಗೆ ಗಾಯದ ತೂತು
ಮಾತಿನಲಿರಲಿ ಮಾರ್ದವತೆ
ತಟ್ಟಲಿ ಹೃದಯದ ಭಾವುಕತೆ

ಆಡುವ ಪ್ರತಿಮಾತಿಗೂ ಇರಲಿ
ಅಂತರಾರ್ಥ
ಆಗದಿರಲಿ ಯಾರಿಗೂ ಅಪಾರ್ಥ
ನುಡಿಯುವ ಮಾತು ಆಗಲಿ ಮುತ್ತು
ಒಳ್ಳೆಯ ಮಾತುಗಾರಿಕೆ ನಿಜಾವದ ಸ್ವತ್ತು

– ಚೇತನ ಭಾರ್ಗವ, ಬೆಂಗಳೂರು

### ಮನುಜತೆಯೇ ಶ್ರೇಷ್ಠ ಮಂತ್ರ...

ಅಂದುಕೊಂಡ ತೆರದಿ
ಯಾಕೋ? ಸಾಗುತಿಲ್ಲ ಜೀವನ....
ಯಾರಿಗ್ಯಾರು ಆಗುತಿಲ್ಲ
ದುಷ್ಟತನದ ನರ್ತನ.....

ನಾನು ಶ್ರೇಷ್ಠ! ನಾನೇ ಶ್ರೇಷ್ಠ!
ಎಂಬವಾದ ನಡೆದಿದೆ....
'ಮನುಜತೆಯೇ' ಶ್ರೇಷ್ಠವೆಂಬ
ಮಂತ್ರ ಮರೆತು ಹೋಗಿದೆ....

ಹೆಂಗೋ? ಏನೋ? ಹಣವ
ಗಳಿಪರಿಂದೆ ಜಗವು ಓಡಿದೆ ....
ಗುಣವು ಯಾಕೋ? ಗೌಣವಾಗಿ
ಮಂಕಾಗುತ ಸಾಗಿದೆ....

ಅಪ್ಪ ಅಮ್ಮ ಬೇಡವಂತೆ!...
ಹೆಂಗೆ ಹಿಂಗೆ ಆದರೆ?
ಮುಂದೆ ನಿಮಗೂ ಇದೆ ಗತಿ!...
ಕಾದೆ! ಇಹುದು ತೊಂದರೆ!....

ಹೇಗೋ? ಏನೋ? ಬದುಕಬಹುದು
ಮನುಜ ಪ್ರೀತಿ ಒಂದಿರೆ!...
ಅವನು ಇವನ ಇವನು ಅವನ
ಕಷ್ಟ ಕಾಲಕಾದರೆ....

ಮೈ ಮರೆವು ಬೇಡ ತಮ್ಮ
ನಿನಗೂ ಕೊನೆಯು ಕಾದಿದೆ!...
ಚಿಗುರಲೆಯು ಉದುರೋ ನಿಯಮ
ಕಾಣದಂತೆ ಲಿಖಿಸಿದೆ!....

– ಶೇಖರಯ್ಯ ಟಿ ಎಚ್ ಎಂ
ಗೆದ್ದಲಗಟ್ಟಿ, ಕೂಡ್ಲಿಗಿ

### ಪರೋಪಕಾರ

ಉಳ್ಳವರು ಮಾತ್ರ ಮಾಡಬೇಕೆಂದಿಲ್ಲ,
ಜನರಿಗೆ ಸಹಾಯ ಸತ್ಕರ್ಮ.
ಜಗದ ನಿಜ ಬಲ್ಲವರು ಮಾಡುವರು,
ಸದಾ ಲೋಕದಲ್ಲಿ ದಾನ ಧರ್ಮ.

ಪರೋಪಕಾರಕ್ಕೆ ಇಲ್ಲ ಕಟ್ಟಳೆಯು,
ಪರರಿಗೆ ಉಪಕಾರಿಯಾಗಿ ಬದುಕು.
ಇರುವುದರಲ್ಲಿಯೇ ಹಂಚಬೇಕು,
ಬೇರೆಯವರ ನೋವಿಗೆ ಸ್ಪಂದಿಸಬೇಕು.

ಇನ್ನೊಬ್ಬರ ಏಳಿಗೆಗಾಗಿ ಕುರುಬದೆ,
ತನ್ನ ಉನ್ನತಿಗಾಗಿ ಶ್ರಮಿಸಬೇಕು.
ಸತ್ಪಾತ್ರರಿಗೆ ಮಾಡಿದ ಉಪಕಾರ,
ಶಿವನಿಗೆ ಮಾಡಿದಂತೆ ಪೂಜೆ ಪುನಸ್ಕಾರ.

– ಮಮತಾ ಶೃಂಗೇರಿ

# ಕುಪ್ಪಳ್ಳಿಯ ಕವಿಮನೆಯಲ್ಲೊಂದು ಸುತ್ತು

ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೆ, ಶಿಲೆಯಲ್ಲವೀ ಕಲೆಯ ಬಲೆಯು' ಎಂದು ಕುವೆಂಪು ಅವರು ಹೊಯ್ಸಳರ ಸೂಕ್ಷ್ಮ ಕಲೆಗೆ ವರ್ಣಿಸಿದ್ದು ಪ್ರಸ್ತುತವಾದಂತೆ, ರಸ ಋಷಿ ಕುವೆಂಪು ಅವರ ಸಮಾದಿ ಸ್ಥಳ 'ಕವಿಶೈಲ'ಕ್ಕೆ ತುಂಬಾ ಅನ್ವಯವಾಗುತ್ತದೆ..

'ಮಲೆನಾಡ ಮಡಿಲಲ್ಲಿ,
ಹಚ್ಚಹಸುರಿನ ಗಿರಿಕಾನನಗಳಲ್ಲಿ ,
ತುಂಗೆಯ ತೀರದಲ್ಲಿ '
ನವೋದಯದ ರಸ ಋಷಿಯ

ಸಿಬ್ಬಲಿಗುಡ್ಡೆಯ ಪಕ್ಕದಲಿ ಇರುವ 'ಕುಪ್ಪಳಿ' ಕಣ್ಮನಗಳನ್ನ ಸೆಳೆಯುವ, ಭಾವುಕಗೊಳಿಸುವ ಭಾವನಾ ಲೋಕಕ್ಕೆ ಕರೆದೊಯ್ಯುವ ಸಾಂಸ್ಕೃತಿಕ ಜಗತ್ತೇ ಆಗಿದೆ.

ನಾವು 4 ವರ್ಷದ ಹಿಂದೆ ಹೋಗುವಾಗ ಕವಿಮನೆ, ಕವಿಶೈಲ ನೋಡುವವರೆಗೂ ಯಾವಾಗ ನೋಡುತ್ತೇವೆಂಬ ಕಾತರ ಹೆಚ್ಚಿತ್ತು. ಸನಿಹ ಹೋದಂತೆಲ್ಲಾ ಇಲ್ಲೇ ಕುವೆಂಪು ಅವರು ಓಡಾಡಿರಬಹುದಲ್ವಾ !? ಅವರ ಹೆಗ್ಗಡತಿಯ ತೋಟ, ಮನೆ ಇಲ್ಲೇ ಇದ್ದೀತಾ!?ಎಂಬ ಕುತೂಹಲ ಹೆಚ್ಚೇ ಇತ್ತು.

ಮನೆಯ ಹೊರ ಆವರಣದಲ್ಲಿರುವ ದೊಡ್ಡ ದೊಡ್ಡ ಒರಳುಕಲ್ಲುಗಳು. ಕವಿಮನೆಯ ಒಳಹೋದರೆ ಭತ್ತತುಂಬಿಡುವ ಮರದ ದೊಡ್ಡ ಕಲಬಿಗಳು, ನಂತರ ಕುವೆಂಪು – ಹೇಮಾವತಿ ಅಮ್ಮನವರ ವಿವಾಹ ಮಂಟಪ, ಲಗ್ನಪತ್ರ, ಅವರ ಜೊತೆ ಮದುವೆಯಾದ ಇನ್ನೊಂದು ಜೋಡಿ ಕುವೆಂಪು ಅವರ ಮಾವನವರದು. ಪ್ರಶಾಂತವಾದ ವಾತಾವರಣದಲ್ಲಿ ಲಗ್ನ ಆಗಬೇಕೆಂದು ಮಧ್ಯರಾತ್ರಿ ಆದ ಮದುವೆ ಅವರದು.

ಅಪ್ಪಟ ಮಲೆನಾಡ ತೊಟ್ಟಿಮನೆ ನಡುವೆ ತುಳಸಿಕಟ್ಟೆ. ಸುತ್ತಲೂ ಜಗುಲಿಯಲ್ಲಿ ಒಂದೆಡೆ ದೊಡ್ಡದಾದ ಅಡುಗೆ ಕೋಣೆ, ಇದುವರೆಗೂ ನಾವು ನೋಡಿರದ ಅಡುಗೆಯ ಪರಿಕರಗಳನ್ನು ನೋಡಿದಷ್ಟು ಸಾಲದು. ದೊಡ್ಡ ದೊಡ್ಡ ಪಾತ್ರೆಗಳು, ಅಳತೆ ಪ್ರಕಾರ ಹಿಟ್ಟು ಕಲೆಸುವ ಹರಿವಾಣಗಳು. ಬಟ್ಟೆಯ ಬುಟ್ಟಿಗಳು, ಮೊರಗಳು, ಬಟ್ಟಲುಗಳು,ಮಡಿಕೆ – ಕುಡಿಕೆಗಳು ಆಗಿನಕಾಲದ ಜೀವನಶೈಲಿಯ ಪ್ರತಿಬಿಂಬಗಳೇ ಆಗಿವೆ. ಅಡುಗೆ ಕೋಣೆಗೆ ಅಂಟಿದ ಊಟದ ಕೋಣೆ ಅನ್ನುವುದಕಿಂತ ಪಡಸಾಲೆ ಸಿರಿವಂತ ಅವಿಭಕ್ತ ಕುಟುಂಬದ ಪ್ರತೀಕ. ಬಾಣಂತಿ ಕೋಣೆಯ ತೊಟ್ಟಿಲು, ಮಂಚ, ಹಂಡೆ ಆರೋಗ್ಯಕರ ಜೀವನದ ರೂಪಗಳು. ನೋಡಿದಷ್ಟು ಮತ್ತೆ ನೋಡಬೇಕೆಂಬ ಹಂಬಲ. ಅಲ್ಲೇ ಇದ್ದು ಬಿಡಬೇಕೆಂಬ ಬಯಕೆ ಆಗಿದ್ದು ನಿಜ. ಮನೆ ಒಳಗೆ ಇರುವ ಕುವೆಂಪು ಅವರು ಬಳಸುತ್ತಿದ್ದ ಮಂಚ, ಅದರ ಮೇಲೆ ತೂಗು ಹಾಕಿರುವ ಅವರ ಹಾಕುವ ಕೋಟು ನೋಡಲೆಷ್ಟು ಸುಂದರ!! ಅದರ ತೋಳಿಗೆ ಹಾಕಿರುವ ಸೊಟ್ಟಪಟ್ಟ ಹೊಲಿಗೆಗಳು ನಮ್ಮ ಜೀವನಕ್ಕೆ ಹತ್ತಿರ. ಅವ್ಯಕ್ತ ಖುಷಿ, ಯಾವುದನ್ನು ಮುಟ್ಟಬಾರದೆಂಬ ನಿಯಮ ಇದ್ದರೂ ಕುವೆಂಪು ಅವರ ಕ್ಷಮೆ ಕೋರಿ ಸ್ವಲ್ಪವೇ ಕೋಟ್ ತೋಳು ಮುಟ್ಟಿ ಅದರ ಭಾವುಕತೆ ಅನುಭವಿಸಿದ್ದೆ "ಕವಿಮನೆ" ತುಂಬಾ ಓಡಾಡುವಾಗ ಅನಿಸಿದ್ದು ಕುವೆಂಪು ಅವರು ಇಲ್ಲಿ ಕೂತಿರಬಹುದಾ!? ಅಥವಾ ಈ ಮೆಟ್ಟಿಲು ಮೇಲೆ ಕೂತಿರಬಹುದಾ ಎನ್ನುವ ಭಾವನೆಯಾಗಿ ಕವಿಮನೆಯಲ್ಲಿ ಎಲ್ಲಿ ಸಾದ್ಯವೋ ಅಲ್ಲಿ ಕೂತಿದ್ದು ಬಂದಿದ್ದು ಅಷ್ಟೇ ನಿಜ. ಮರದ ಮೆಟ್ಟಿಲಿನಿಂದ ಮೇಲಿನ ಮನೆಗೆ ಹೋದರೆ ಸಾರಸ್ವತ ಲೋಕವೇ ತೆರೆದುಕೊಳ್ಳುತ್ತದೆ. ಅವರ ಎಲ್ಲಾ ಕವನ ಸಂಕಲನ, ಕಾದಂಬರಿ, ಕಥೆ, ನಾಟಕಗಳು ಎಲ್ಲವೂ ಅಲ್ಲಿ ಸಂಗ್ರಹಿಸಿಡಲಾಗಿದೆ. ಅವರ ಪ್ರಶಸ್ತಿಗಳು, ಡಾಕ್ಟರೇಟ್ ಪದವಿಗಳು, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಎಲ್ಲವೂ ಕಣ್ತುಂಬಿಕೊಳ್ಳುತ್ತೇವೆ. ಅವರ ವಾಚ್, ಕೂದಲು, ಬಟ್ಟೆ, ಮನೆಯಲ್ಲಿರುವ ಲೋಟಗಳು, ಕೊಡ, ಗಂಗಾಳ, ಬಟ್ಟಲು ಎಲ್ಲವೂ ಸತ್ಯವಸ್ಥಿತವಾಗಿ ನೋಡಲು ಲಭ್ಯ.

ಊಟದ ಕೋಣೆಯಲ್ಲಿ ಅವರ, ಅವರ ಕುಟುಬದವರ ಅವರೂಪದ ಫೋಟೋಗಳು, ಪಕ್ಷಿಗಳ ಫೋಟೋಗಳು ಎಲ್ಲವೂ ಅವರ ಕಾಲಘಟ್ಟಕ್ಕೆ ಕರೆದೊಯ್ಯುತ್ತವೆ. ಓದಿದ್ದ 'ಸುಷ್ಮ ಮತ್ತು ಮರಿಹಕ್ಕಿ' ಪಾಠದಲ್ಲಿ ಬಂದಿದ್ದ ತೇಜಸ್ವಿ ಮಗಳು ಸುಷ್ಮಳನ್ನು ಅಲ್ಲಿರುವ ಫೋಟೋ ಸಂಗ್ರಹದಲ್ಲಿ ನೋಡಿ ಖುಷಿಯಾಗಿತ್ತು. ಕುವೆಂಪು ಅವರ ಮಕ್ಕಳಾದ ಕೋಕಿಲಚೈತ್ರ, ತೇಜಸ್ವಿ, ರಾಜೇಶ್ವರಿ ಅಮ್ಮ ಹೀಗೆ ಪ್ರತಿಯೊಬ್ಬರ ಬಾಲ್ಯದಿಂದ ಹಿಡಿದು ಈಗಿನ ವರೆಗಿನ ಫೋಟೋಗಳು ಅದರ ವಿವರಗಳು ಲಭ್ಯ.

ಅದರ ಜೊತೆ ಜೊತೆಗೆ 'ರಾಮಾಯಣ ದರ್ಶನಮ್' ನ ಸಾಲುಗಳುಗಳನ್ನು ಬರೆದು ಹಾಕಲಾಗಿದೆ.

ಕವಿಮನೆ ನೋಡುತ್ತಿದ್ದರೆ ಭಾವುಕರಾಗುವುದಂತೂ ಖಂಡಿತ. ಹಿರಿಯರ ಬದುಕಿನ ಶೈಲಿಯೇ ಅಲ್ಲಿದೆ. ಒಕ್ಕುಟುಂಬದ ಸ್ವಾದದ ಸಂದೇಶ ಅಲ್ಲಿದೆ.

ಮುಂದೆ ಬಂದರೆ ನಮ್ಮ ಅಭಿಪ್ರಾಯಗಳ ಬರವಣಿಗೆ, ಅದರ ಕುವೆಂಪು, ತೇಜಸ್ವಿ ಅವರ ಪುಸ್ತಕ ರಿಯಾಯಿತಿ ಧರದಲ್ಲಿ ಪುಸ್ತಕ ಮಾರಾಟ ಮಳಿಗೆ ಇದ್ದು, ನಾವು "ಅಣ್ಣನ ನೆನಪು, "ಮನುಜಮತ ವಿಶ್ವಪಥ " ಹೀಗೆ ಕೆಲವು ಪುಸ್ತಕ ತೆಗೆದುಕೊಂಡೆವು. 'ಅಣ್ಣನ ನೆನಪುವಿನಲ್ಲಿ ಕುವೆಂಪು ಅವರ ಮೈಸೂರಿನ ನೆನಪುಗಳು, ಅವರ ಮಕ್ಕಳ ಬಾಲ್ಯದ ನೆನಪಿನ ಮೆರವಣಿಗೆ ಇದ್ದು, ಬಿಡದೇ ಓದಿಸಿಕೊಂಡು ಹೋಗುತ್ತದೆ. ಕವಿ ಮನೆ ಆವರಣದ ಹೊರಗೆ, ಕೃಷಿ ಪರಿಕರಗಳನ್ನ ಇರಿಸುವ ಕೋಣೆ. ಅದರಲ್ಲಿನ ಆಗಿನ ಕಾಲದ ಬಂಡಿ, ಗೆರಸಿ, ನೇಗಿಲು, ರಂಟೆಕುಂಟೆ, ಬೆಲ್ಲ ಮಾಡುವ ದೊಡ್ಡ ಅಚ್ಚುಗಳು ಎಲ್ಲವೂ ಲಭ್ಯ. ಮುಂದಿನ ಪೀಳಿಗೆಗೆ ತೋರಿಸುವ ಸಂಗ್ರಹವೇ ಆಗಿದೆ.

ಕವಿಮನೆಯನ್ನು ನೋಡಿ 4 ವರ್ಷವಾದರೂ, ಆ ನೆನಪು ಇನ್ನು ಕವಿಮನೆಯಲ್ಲೆ ಇದ್ದೀವಿ ಎಂಬ ಭಾವ. ಆಗಿನ ಕಾಲವೇ ಚಂದ. ಅದ್ಬುತ, ಒಗ್ಗಟ್ಟಿನ ಹಿರಿಮೆ ಇನ್ನೂ ಹೀಗೆಯೇ ಮುಂದುವರೆಯಲಿ. ಕುವೆಂಪು ಅವರ ಮನೆಯ ನೆನಪಿ ನೊಂದಿಗೆ ಅವರಿಗೆ ನಮಿಸುತ್ತಾ ಧನ್ಯವಾದಗಳು. ಸಾರಸ್ವತ ಲೋಕ ಕರುನಾಡಲ್ಲಿ ಜನಿಸಿದ ನಾವುಗಳೇ ಧನ್ಯರು.





ಲೀಲಾವತಿ ವಿಜಯಕುಮಾರ
ಅಂಕಸಮುದ್ರ, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper



# ಕೊಪ್ಪಳ ಅಜ್ಜನ ಮಹಾರಥೋತ್ಸವ ಜಾತ್ರಾ ಆವರಣ ಸಿದ್ಧತೆ



■ ಹಂಪಿ ಟೈಮ್ಸ್ ಕೊಪ್ಪಳ

2025 ಜನೇವರಿ 15ರಂದು ಜರುಗಲಿರುವ ಶ್ರೀ ಗವಿಮಠದ ಮಹಾರಥೋತ್ಸವದ ಅಂಗವಾಗಿ ಶ್ರೀ ಗವಿಮಠದ ಆವರಣದ ಮುಂಭಾಗದಲ್ಲಿನ ಆವರಣದಲ್ಲಿ ಸುಮಾರು 22 ಎಕರೆ ವಿಸ್ತೀರ್ಣವುಳ್ಳ, 900 ರಿಂದ 1000 ಅಂಗಡಿಗಳಿಗೆ ವ್ಯವಸ್ಥೆ ಕಲ್ಪಿಸುವ ಜಾತ್ರಾ ಹಾಗೂ ಮಹಾರಥೋತ್ಸವ ಆವರಣ ಸ್ವಚ್ಛತಾ ಕಾರ್ಯಗಳೆಲ್ಲವು ಮುಗಿದು ಸಂಪೂರ್ಣವಾಗಿ ಸಿದ್ಧಗೊಂಡಿದೆ

ಈ ಬೃಹತ್ ಸ್ವಾಗತ ಮಹಾದ್ವಾರಗಳ ಮುಖೇನ ಜನರಿಗೆ ರಹದಾರಿಯನ್ನು ಕಲ್ಪಿಸಲಾಗಿದ್ದು, ಈ ವಿಶಾಲವಾದ ಆವರಣದಲ್ಲಿ ಪ್ರತಿವರ್ಷ ಜಾತ್ರೆ ಆವರಣದಲ್ಲಿ ಮಳಿಗೆಗಳನ್ನು ಹಾಕಲಾಗುತ್ತದೆ. ಪ್ರತಿ ಸಾಲುಗಳ ಮಧ್ಯ ಜನಸಂದಣಿ ಆಗದಂತೆ ಸಮತಟ್ಟಾದ ರಸ್ತೆಗಳನ್ನು ನಿರ್ಮಿಸಲಾಗುತ್ತದೆ. ಪ್ರತಿ ಸಾಲಿನಲ್ಲಿರುವ ಅಂಗಡಿಗಳು ಶಿಸ್ತಿನಿಂದ ಸಾಲಾಗಿ ಹಾಕಲಾಗುವುದರಿಂದ ಅವುಗಳ ಶಿಸ್ತು ಸಹ ಜಾತ್ರಾ ಆಕರ್ಷಣೆಗಳಲ್ಲಿ ಒಂದಾಗಿದೆ.

ಅಲ್ಲದೇ ಜಾತ್ರಾ ಮಹೋತ್ಸವದ ಅಂಗಡಿಗಳ ಆವರಣಗಳಲ್ಲಿ ಮಹಾರಥೋತ್ಸವದಿಂದ ಹಿಡಿದು ಅಮವಾಸ್ಯೆಯವರೆಗೆ ಜನಸಂದಣಿ ಅಪಾರವಾಗಿ ಕೂಡುತ್ತದೆ. ಮಹಿಳೆಯರ, ಮಕ್ಕಳ, ವಯೋವೃದ್ದರ ಹಿತದೃಷ್ಟಿಯಿಂದ ಮತ್ತು ಹಣ, ಬಂಗಾರದ ಆಭರಣಗಳು, ಮೊಬೈಲ್ ಕಳ್ಳತನ ಮಾಡುವ ಕಳ್ಳಕಾಕರನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಾತ್ರೆಯನ್ನು ಶಿಸ್ತಿನಿಂದ ನೆರವೇರಿಸಲು ಅಲ್ಲಲ್ಲಿ ಸಿ.ಸಿ. ಕ್ಯಾಮರಗಳನ್ನು ಸಹ ಅಳವಡಿಸಲಾಗಿರುತ್ತದೆ ಓ.ಪಿ.ಡಿ ಚಿಕಿತ್ಸಾ ಕೇಂದ್ರಗಳು ಮತ್ತು ತುರ್ತು ಚಿಕಿತ್ಸಾ ಕೇಂದ್ರಗಳನ್ನು ಆವರಣದಲ್ಲಿ ತೆರೆಯಲಾಗುತ್ತದೆ.

ಸ್ವಚ್ಛತೆ ಹಾಗೂ ನೈರ್ಮಲ್ಯತೆಯನ್ನು ಕಾಯ್ದುಕೊಳ್ಳಲು ಪೂರ್ವಭಾವಿಯಾಗಿ ಶ್ರೀ ಮಠವು ಜಾತ್ರಾ ಮಳಿಗೆಗಳ ಸನಿಹದಲ್ಲಿಯೇ ಸಕಲ ಮೂಲ ಸೌಕರ್ಯಗಳನ್ನು ಒದಗಿಸಲಾಗುತ್ತದೆ. ವ್ಯಾಪಾರ ಮತ್ತು ಮನೋರಂಜನೆಯ ಅಂಗಡಿಗಳು ಆವರಣದಲ್ಲಿ ಎದ್ದು ನಿಲ್ಲಲಿವೆ ಎಂದು ಶ್ರೀಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಹೊಸಪೇಟೆ ತಾಲೂಕಿನ ಮಲಪನಗುಡಿಯಲ್ಲಿ ವಿಜಯನಗರ ಪ.ಪೂ.ಕಾಲೇಜಿನಿಂದ ನಡೆಯುತ್ತಿರುವ ಎನ್‌ಎಸ್‌ಎಸ್ ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ ಯೋಗಾಸನದೊಂದಿಗೆ ಅದರ ಮಹತ್ವ ತಿಳಿಸಿದರು. ನಂತರ ಶ್ರಮದಾನದಲ್ಲಿ ತೊಡಗಿದರು. ಯೋಗ ಸಾಧಕರು, ಶಿಬಿರದ ಅಧಿಕಾರಿ ಕೆ.ಶರಣಬಸವ ಹಸಮಕಲ್ ಇತರರು ಇದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು

HAMPI TIMES VIJAYANAGARA

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

### ಇತಿಹಾಸ: ಅಧ್ಯಾಯ –20 : ಮಹಾಯುದ್ಧಗಳು ಹಾಗೂ ಭಾರತದ ಪಾತ್ರ

**1.ಹೊಲೊಕಾಸ್ಟ್ ಎಂದರೇನು?**
ಉತ್ತರ: ಹಿಟ್ಲರ್‌ನು ನಡೆಸಿದ ಯಹೂದಿಗಳ ಸಾಮೂಹಿಕ ಕಗ್ಗೊಲೆಯನ್ನು ಹೊಲೊಕಾಸ್ಟ್ ಎನ್ನುವರು

**2. ತೀನ್‌ಮೂರ್ತಿ ಭವನ ಎಲ್ಲಿದೆ?(ಏ.2024)**
ಉತ್ತರ: ತೀನ್‌ಮೂರ್ತಿ ಭವನ ದೆಹಲಿಯಲ್ಲಿದೆ

**3. ತೀನ್‌ಮೂರ್ತಿ ಭವನವನ್ನು ಪ್ರಾಮುಖ್ಯತೆ ಏನು? (ಜೂನ್ 2023)**
ಉತ್ತರ: ಮೈಸೂರ್,ಜೋಧಪುರ ಹಾಗೂ ಹೈದರಾಬಾದ್ ಸೈನಿಕರು ಮೊದಲ ಮಹಾ ಯುದ್ಧದಲ್ಲಿ ಭಾಗವಹಿದ ನೆನಪಿಗಾಗಿ, ಇವರುಗಳ ಹೆಸರಿನಲ್ಲಿ ಬ್ರಿಟಿಷರು ದೆಹಲಿಯಲ್ಲಿ ತೀನ್‌ಮೂರ್ತಿ ಭವನವನ್ನು ನಿರ್ಮಿಸಿದರು.

**4. ಗೊಬೆಲ್ಸ್ ಎಂದರೆ ಯಾರು?**
ಉತ್ತರ: ಜರ್ಮನಿಯಲ್ಲಿ ಜನಾಂಗೀದ್ವೇಷವನ್ನು ಸಾರಲು ಹಿಟ್ಲರ್‌ನು ನೇಮಿಸಿದ್ದ ಮಂತ್ರಿ ಪಡೆಯನ್ನೇ ಗೊಬೆಲ್ಸ್ ಎನ್ನುವರು

**5. ಪ್ರಥಮ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವೇನು? (ಏಪ್ರಿಲ್ 2023, ಏಪ್ರಿಲ್ 2024)**
ಉತ್ತರ: ಆಸ್ಟ್ರಿಯಾದ ರಾಜಕುಮಾರ ಆರ್ಚಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ ಪ್ರಥಮ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣಯಿತು

**6. ಪ್ರಥಮ ಮಹಾಯುದ್ಧದ ಸಂಧರ್ಭದಲ್ಲಿ ರಚನೆಯಾದ ಪರಸ್ಪರ ಮೈತ್ರಿ ಕೂಟಗಳು ಯಾವುವು?**
ಉತ್ತರ: 1. ಕದನ ಬಾಂಧವ್ಯತ್ರಯ ಬಣ:–
ಜರ್ಮನಿ, ಇಟಲಿ, ಆಸ್ಟ್ರಿಯ– ಹಂಗೇರಿ
2.ಕದನ ಸೌಹಾರ್ದತೆಯ ಬಣ:– ಬ್ರಿಟನ್, ಫ್ರಾನ್ಸ್, ರಷ್ಯ.

**7. ಮೊದಲನೇ ಮಹಾಯುದ್ಧವು ಯಾವ ಒಪ್ಪಂದದೊಂದಿಗೆ ಅಂತ್ಯಗೊಂಡಿತು?.**
ಉತ್ತರ: ವರ್ಸೈಲ್ಸ್ ಒಪ್ಪಂದದೊಂದಿಗೆ ಅಂತ್ಯಗೊಂಡಿತು

**8. 2ನೇ ಮಹಾಯುದ್ಧದಲ್ಲಿ ಅಮೆರಿಕದ ದಾಳಿಗೆ ಒಳಗಾದ ಜಪಾನಿನ ನಗರಗಳಾವವು?**
ಉತ್ತರ: ಹಿರೋಶಿಮಾ & ನಾಗಾಸಾಕಿ

**9. ಜಪಾನ್ ದಾಳಿ ಮಾಡಿದ ಅಮೇರಿಕಾದ ನೌಕಾನೆಲೆ ಯಾವುದು?**
ಉತ್ತರ: ಪರ್ಲಹಾರ್ಬರ್

**10. 2ನೇ ಮಹಾಯುದ್ಧದ ಸಂಧರ್ಭದಲ್ಲಿ ರಚನೆಯಾದ ಪರಸ್ಪರ ಮೈತ್ರಿ ಕೂಟಗಳು ಯಾವುವು?**
ಉತ್ತರ: 1. ಆಕ್ಸಿಸ್(ಶತ್ರು)ಬಣ: ಜರ್ಮನಿ, ಇಟಲಿ, ಜಪಾನ್ 2. ಮಿತ್ರಬಣ(ಆಲೈಸ್) ಬ್ರಿಟನ್, ಫ್ರಾನ್ಸ್, ರಷ್ಯಾ

**11. ಎರಡನೆಯ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವೇನು?**
ಉತ್ತರ: ಹಿಟ್ಲರ್ ಪೋಲಂಡ್ ಆಕ್ರಮಿಸಿದ್ದು, ಎರಡನೆಯ ಮಹಾಯುದ್ಧಕ್ಕೆ ತತ್ಷಣದ ಕಾರಣವಾಯಿತು.

**12.ಜರ್ಮನಿಯಲ್ಲಿ ನಾಜಿಪಕ್ಷ ಮತ್ತು ಬೂದುಅಂಗಿ ದಳ ಎಂಬ ಸೈನ್ಯಪಡೆಯನ್ನು ಸ್ಥಾಪಿಸಿದವನು ಯಾರು?** ಉತ್ತರ: ಹಿಟ್ಲರ್

**13.ಇಟಲಿಯಲ್ಲಿ ಫ್ಯಾಸಿಸ್ಟ್ ಮತ್ತು ಕಪಂಗಿ ದಳ ಎಂಬ ಸೈನ್ಯಪಡೆಯನ್ನು ಸ್ಥಾಪಿಸಿದವರು ಯಾರು?** ಉತ್ತರ: ಮುಸ್ಸಲೋನಿ

**14. 1ನೇ ಮಹಾಯುದ್ಧಕ್ಕೆ ಕಾರಣಗಳೇನು?**
ಉತ್ತರ: * ಯುರೋಪಿನ ದೇಶಗಳ ಪೈಪೋಟಿ, * ಅತಿಯಾದ ಉಗ್ರ ರಾಷ್ಟ್ರೀಯತೆ * ಅತಿಯಾದ ಮಿಲಿಟರೀಕರಣ * ಸಾಮ್ರಾಜ್ಯವಾದ ನೀತಿ * ಪರಸ್ಪರ ಮೈತ್ರಿಕೂಟ ರಚನೆ * ಆಸ್ಟ್ರಿಯಾದ ರಾಜಕುಮಾರನ ಕೊಲೆ.

**15. ಪ್ರಥಮ ಮಹಾಯುದ್ಧದ ಪರಿಣಾಮಗಳೇನು? (ಜೂನ್ 2024)**
ಉತ್ತರ: 1. ಜರ್ಮನಿಯು ವರ್ಸೆಲ್ಸ್ ಒಪ್ಪಂದಕ್ಕೆ ಸಹಿ ಹಾಕಿತು. 2. ಜರ್ಮನಿ ತನ್ನ ಪ್ರದೇಶಗಳನ್ನು ಕಳೆದುಕೊಂಡಿತು. 3. ಆಸ್ಟೋ–ಹಂಗೇರಿ ಮತ್ತು ಟರ್ಕಿ ಸಾಮ್ರಾಜ್ಯಗಳು ತಮ್ಮ ಅಸ್ತಿತ್ವ ಕಳೆದುಕೊಂಡವು. 4. ಹಲವಾರು ಸಣ್ಣ ಸ್ವತಂತ್ರ ರಾಷ್ಟಗಳು ಅಸ್ತಿತ್ವಕ್ಕೆ ಬಂದವು. 5. ಯುರೋಪಿನ ಭೂಪಟವೇ ಬದಲಾಯಿತು. 6. ರಾಷ್ಟಸಂಘ ರಚನೆಯಾಯಿತು.

**16. ಫ್ಯಾಸಿಸ್ಟ್ ವಾದದ ಲಕ್ಷಣಗಳಾವುವು?**
ಉತ್ತರ: 1. ಇಟಲಿಯ ಪ್ರಧಾನಿ ಮುಸೋಲಿನಿ 'ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷ'ದ ಸ್ಥಾಪಕ. 2. ಉಗ್ರ ರಾಷ್ಟ್ರೀಯವಾದ, 3.ಪರಕೀಯ ಶಕ್ತಿಗಳ ನಾಶ 4.ಜನಾಂಗೀಯ ಶ್ರೇಷ್ಠತೆ, 5.ಹಿಂಸೆಯ ವೈಭವೀಕರಣ 6. ನರಮೇಧಗಳಿಗೆ ಬೆಂಬಲ 7. ಸಾಮ್ರಾಜ್ಯವಾದದ ವಿಸ್ತರಣೆ,

**17. 2ನೇ ಮಹಾಯುದ್ಧಕ್ಕೆ ಕಾರಣಗಳೇನು?**
ಉತ್ತರ: * ಆರ್ಥಿಕ ಮಹಾಕುಸಿತ.* ಅವಮಾನಕರ ಒಪ್ಪಂದಗಳು. * ರಾಷ್ಟಸಂಘದ ವಿಫಲತೆ * ಸರ್ವಾಧಿಕಾರಿಗಳ ಏಳಿಗೆ * ಹಿಟ್ಲರ್ ಪೋಲೆಂಡ್ ಆಕ್ರಮಿಸಿದ್ದು.* ಉಗ್ರ ರಾಷ್ಟ್ರೀಯವಾದ * ಮೊದಲನೆ ಮಹಾಯುದ್ಧದ ಸೋಲು

**18. 2ನೇಯ ಮಹಾಯುದ್ಧದ ಪರಿಣಾಮಗಳಾವುವು? (ಜೂನ್ 2020)**
ಉತ್ತರ: 1. ಮಿತ್ರ ಬಣ ವಿಜಯಿಯಾಯಿತು. 2. ಅಪಾರ ಸಾವು–ನೋವು ಉಂಟಾಯಿತು. 3.ವಿಶ್ವಸಂಸ್ಥೆ ರಚನೆಯಾಯಿತು. 4. ಅಮೆರಿಕ ರಷ್ಯಾ, ಚೀನಾ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಭದ್ರತಾ ಮಂಡಳಿಯ ಖಾಯಂ ಸದಸ್ಯರಾದರು. 5. ರಷ್ಯಾ ಮತ್ತು ಅಮೆರಿಕ ಪರಸ್ಪರ ವಿರೋಧಿ ದೇಶಗಳಾದವು. 6. ಇದು ಶೀತಲ ಸಮರ ಕಾರಣವಾಯಿತು. 7.ಏಷ್ಯಾ ಮತ್ತು ಆಫ್ರಿಕಾದ ವಸಾಹತುಗಳು ಸ್ವಾತಂತ್ರ್ಯ ಪಡೆದವು. 8.ಅಣ್ವಸ್ತ್ರ ಪೈಪೋಟಿಗೆ ದಾರಿಯಾಯಿತು.

| ಪ್ರಮುಖ ಘಟನೆಗಳು | ವರ್ಷ |
|---|---|
| 1ನೇ ಮಹಾಯುದ್ಧ | 1914–18 |
| ರಷ್ಯದ ಮಹಾಕಾಂತ್ರಿ | 1917 |
| ವರ್ಸೇಲ್ಸ್ ಒಪ್ಪಂದ | 1919 |
| ಆರ್ಥಿಕ ಮಹಾಕುಸಿತ | 1929 |
| 2ನೇ ಮಹಾಯುದ್ಧ | 1939–1945 |
| ವಿಶ್ವಸಂಸ್ಥೆ ಸ್ಥಾಪನೆ | 1945 |

"ಇಂದಿನ ಪರಿಶ್ರಮವೇ ನಾಳಿನ ಯಶಸ್ಸು"

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ:9916567120


ಸಾಯಿಮಣಿ ಪ್ರಕಾಶನ, ಹೊಸಪೇಟೆ

## ಸುತ್ತ ಮುತ್ತ ಕುಂದು-ಕೊರತೆ

**********

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ?

ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು ಹಂಪಿ ಟೈಮ್ಸ್ ದಿನಪತ್ರಿಕೆ 9448633038 ವಾಟ್ಸಪ್ ನಂಬರ್ ಗೆ ಕಳುಹಿಸಿ.



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 28–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.22 ಅಡಿ |
| ಒಳ ಹರಿವು | 456ಕ್ಯುಸೆಕ್ |
| ಹೊರ ಹರಿವು | 8895 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 83.988 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1589.33 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 669 ಕ್ಯುಸೆಕ್ |
| ಸಾಮರ್ಥ್ಯ | 10.482 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**29–12–2024 – ಭಾನುವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಜ್ಯೇಷ್ಠ |
| ಯೋಗ | : ಗಂಡ |
| ಕರಣ | : ವಿಷ್ಟಿ |
| ಸೂರ್ಯೋದಯ | : 07:08:36 |
| ಸೂರ್ಯಾಸ್ತ | : 17:49:49 |
| ರಾಹು ಕಾಲ | : 16:30–17:50 |
| ಯಮಘಂಡ ಕಾಲ | : 12:29–13:49 |
| ಗುಳಿಕ ಕಾಲ | : 15:10–16:30 |

CALL LUS FOR EVENT
Coverage
94486 33038

### ತಾಲೂಕು ಮಟ್ಟದ ಮಹಿಳಾ ವಿಚಾರ ಗೋಷ್ಠಿ

# ಮಹಿಳಾ ಸಬಲೀಕರಣದ ಶಕ್ತಿ ಧರ್ಮಸ್ಥಳ ಡಾ.ವೀರೇಂದ್ರ ಹೆಗ್ಡೆ

### ಯೋಜನೆಯ ಜಿಲ್ಲಾ ನಿರ್ದೇಶಕರು ಸತೀಶ್ ಶೆಟ್ಟಿ ಅಭಿಮತ



**ಹಂಪಿ ಟೈಮ್ಸ್ ಕೊಟ್ಟೂರು.**
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿದ್ದಿ ಯೋಜನೆ ಮೂಲಕ ಸ್ವ ಸಹಾಯ ಸಂಘದ ಸದಸ್ಯರಿಗೆ ಆರ್ಥಿಕ ಸಹಕಾರದ ಜೊತೆ ಶ್ರಮ, ಶಿಕ್ಷಣ, ಸ್ವಾವಲಂಬಿ ಬದುಕು ಹಾಗೂ ಸಂಸ್ಕಾರಯುತ ಜೀವನಕ್ಕೆ ಪ್ರೇರಣೆ ನೀಡಿ, ಮಹಿಳೆಯರ ಗೌರವ, ಸ್ಥಾನಗಳನ್ನು ಕುಟುಂಬ, ಸಮಾಜದಲ್ಲಿ ಹೆಚ್ಚುವಂತ ಕಾರ್ಯವನ್ನು ಡಾ.ವೀರೇಂದ್ರ ಹೆಗಡೆ ಅವರು ಮಾಡಿದ್ದಾರೆ ಎಂದು ಯೋಜನೆಯ ಜಿಲ್ಲಾ ನಿರ್ದೇಶಕರು ಸತೀಶ್ ಶೆಟ್ಟಿ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೊಟ್ಟೂರು ತಾಲ್ಲೂಕು ಯೋಜನಾ ಕಚೇರಿಯಿಂದ ಉಜ್ಜಿನಿ ಗ್ರಾಮ ಮರಳುಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ತಾಲ್ಲೂಕು ಮಟ್ಟದ ಮಹಿಳಾ ವಿಚಾರ ಗೋಷ್ಠಿ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಪೂಜ್ಯ ವೀರೇಂದ್ರ ಹೆಗ್ಗಡೆ ಯವರು 18 ನೇ ವಯಸ್ಸಿಗೆ ಧರ್ಮಧಿಕಾರಿ ಪಟ್ಟ ಸ್ವೀಕರಿಸಿ ಸಮಾಜಕ್ಕೆ ನೂರಾರು ಅಭಿವೃದ್ಧಿ ಕಾರ್ಯಕ್ರಮ ಗಳನ್ನು ಈ ಯೋಜನೆಯ ಮೂಲಕ ಕೊಡುತ್ತಿದ್ದಾರೆ ಎಂದರು.

ಹೇಮಾವತಿ ಅಮ್ಮನವರ ಕನಸಿನ ಕೂಸದ ಜ್ಞಾನವಿಕಾಸ ಕಾರ್ಯಕ್ರಮದಡಿ ಪ್ರತಿ ತಿಂಗಳು ಪ್ರತಿ ಕುಟುಂಬದ ಅಭಿವೃದ್ಧಿಗೆ ಬೇಕಾಗುವ ವಿವಿಧ ರೀತಿಯ ಜ್ಞಾನವನ್ನು ಕೊಟ್ಟಿದೆ ಜೊತೆಗೆ ತರಬೇತಿ ನೀಡುತ್ತಿದ್ದಾರೆ ಸಂಘವು ಇಂದು ಹೆಣ್ಣಿಗೆ ಗೌರವ ತಂದು ಕೊಟ್ಟಿದೆ. ಬೇರೆ ಕುಟುಂಬಕ್ಕೆ ಸಹಾಯ ಮಾಡುವ ಅವಕಾಶವನ್ನು ಕೊಟ್ಟಿದೆ ಎಂದರು.

ಸದ್ಧರ್ಮ ಹಿರಿಯ ನಾಗರೀಕ ವೇದಿಕೆ ಕಾರ್ಯದರ್ಶಿ ಶಿವಕುಮಾರ್ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಸಂಘವು ಕೆರೆ ಹೂಳೆತ್ತುವ ಕಾರ್ಯಕ್ರಮ, ದೇವಸ್ಥಾನಗಳ ಜೀರ್ಣದ್ದಾರೆಕ್ಕೆ ನೆರವು, ಹಾಲಿನ ಡೈರಿ ಕಟ್ಟಡಗಳಿಗೆ ಅನುದಾನ, ಮದ್ಯ ವರ್ಜನ ಶಿಭೀರ ಗಳನ್ನು ಕೈಗೊಂಡು, ನಿರುದ್ಯೋಗ ಯುವಕರಿಗೆ ರುಡ್ಸೆಟ್ ಸಂಸ್ಥೆ ಮೂಲಕ ತರಬೇತಿ ನೀಡಿದೆ ಎಂದರು.

ಅಂಬೇಡ್ಕರ್ ಸಂಘದ ಅಧ್ಯಕ್ಷರಾದ ವಸಂತ್ ಕುಮಾರ್, ಸಣ್ಣರಂಗಪ್ಪ ವಾಲ್ಮೀಕಿ ಸಂಘದ ಅಧ್ಯಕ್ಷರು,ಸದ್ಧರ್ಮ ಹಿರಿಯ ನಾಗರಿಕ ವೇದಿಕೆ ಅಧ್ಯಕ್ಷರು ಚನ್ನಾವಿರಸ್ವಾಮಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಜ್ಜಿನಿ ಗ್ರಾಮ ಪಂಚಾಯತಿ ಅಧ್ಯಕ್ಷರು ಡಿ ನಿಂಗಮ್ಮ, ಗ್ರಾಮ ಪಂಚಾಯತಿ ಉಪಾಧ್ಯಕ್ಷರು ಪುಷ್ಪವತಿ,ಕೊಟ್ರೇಶ್, ಮರುಳ ಸಿದ್ದೇಶ್ವರ, ವೆಂಕಟೇಶ್, ಸದ್ಧರ್ಮ ಹಿರಿಯ ನಾಗರಿಕೆ ವೇದಿಕೆ ಉಪಾಧ್ಯಕ್ಷರು ಎಸ್. ವೀರಣ್ಣ, ಸದಸ್ಯರು ಗೋಪಾಲ್ ಶೆಟ್ರು, ಜಂಬಣ್ಣ,ಯು ನಾಗಣ್ಣ, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರು ಮಲ್ಲಿಕಾರ್ಜುನಪ್ಪ, ನೇತ್ರಾವತಿ, ಯೋಗೇಶ್ವರ್ ದಿನ್ನೇ, ಯಾರ್ರಿಸ್ವಾಮಿ ವಕೀಲರು ಹಾಜರಿದ್ದರು. ತಾಲೂಕು ಯೋಜನಾಧಿಕಾರಿ ನವೀನ್ ಕುಮಾರ್ ಸ್ವಾಗತಿಸಿದರು, ಮೇಲ್ವಿಚಾರಕರು ರುದ್ರೇಶ್ ನಿರೂಪಿಸಿದರು. ಸೌಮ್ಯ ಜ್ಞಾನವಿಕಾಸ ಸಮನ್ವಯಧಿಕಾರಿ ವಂದಿಸಿದರು.

2025 New Year Wishes Advertisement Booking Open

Celebrate this New Year with a personal touch!

Feature your photo or your children's photo in our special New Year Wishes Publication and share your joy with loved ones

Happy New Year

Hurry! Limited slots available



Advance Booking Open Now!
Book Advance your Publication Date

Don't miss this opportunity to make your wishes stand out!

For booking contact:
M: 9448633038

ಶ್ರೀ ಶಂಕರ ಎಂಟರ್‌ಪ್ರೈಸಸ್ ಲಿ.
ಜಂಗಮಸೋವೆನಹಳ್ಳಿ, ಕೂಡ್ಲಿಗಿ ತಾಲೂಕು, ವಿಜಯನಗರ ಜಿಲ್ಲೆ

ನಾಡಿನ ಸಮಸ್ತ ಜನರಿಗೆ
ಹೊಸ ವರ್ಷವು ನಿಮಗೆ ಆರೋಗ್ಯ, ಆಯುಷ್ಯ, ಸಂತೋಷ ಮತ್ತು ಯಶಸ್ಸು ತರಲಿ.

ಹೊಸ ವರ್ಷದ ಹಾರ್ದಿಕ ಶುಭಾಶಯಗಳು



ಪರಿಶುದ್ಧ ಗಾಣದ ಶೇಂಗಾ ಮತ್ತು ಕೊಬ್ಬರಿ ಎಣ್ಣೆಗಾಗಿ ಸಂಪರ್ಕಿಸಿ
M:90083 66606

Happy New Year 2025

ಮರದ ಗಾಣದ ಎಣ್ಣೆ ಬಳಕೆಯಿಂದಾಗುವ ಆರೋಗ್ಯದ ಪ್ರಯೋಜನಗಳು:

**ಪೋಷಕಾಂಶಗಳು:** ಗಣನೀಯ ಪ್ರಮಾಣದಲ್ಲಿ ವಿಟಮಿನ್ ಇ, ಒಮೇಗಾ ಫ್ಯಾಟಿ ಆಮ್ಲಗಳು ಹಾಗೂ ಆಂಟಿಆಕ್ಸಿಡೆಂಟ್‌ಗಳನ್ನು ಹೊಂದಿದೆ, ಇದು ಹೃದಯಕ್ಕೆ ಹಾಗೂ ಚರ್ಮಕ್ಕೆ ಉತ್ತಮ.

**ಹೃದಯ ಆರೋಗ್ಯ:** ಇದರಲ್ಲಿ ತುಂಬಾ ಕಡಿಮೆ ಪ್ರಮಾಣದ ತೃಪ್ತ ಕೊಬ್ಬುಗಳು ಇರುತ್ತವೆ, ಇದರಿಂದ ಹೃದಯಕ್ಕೆ ಒತ್ತಡ ಕಡಿಮೆಯಾಗುತ್ತದೆ ಮತ್ತು ಕೆಟ್ಟ ಕೊಲೆಸ್ಟ್ರಾಲ್ ಮಟ್ಟವನ್ನು ತಗ್ಗಿಸಲು ಸಹಾಯ ಮಾಡುತ್ತದೆ.

**ಪಚನ ಕ್ರಿಯೆ:** ಮರದ ಗಾಣದ ಎಣ್ಣೆ ಪಚನಕ್ಕಾಗಿ ಉತ್ತಮ, ಇದನ್ನು ಬಳಸಿದರೆ ಎದೆಜ್ವಾಲೆ ಅಥವಾ ಗ್ಯಾಸ್ಟ್ರಿಕ್ ಸಮಸ್ಯೆಗಳನ್ನೂ ತಡೆಯಬಹುದು.

**ಹಾರ್ಮೋನ್ ಸಮತೋಲನ:** ಇಂತಹ ಎಣ್ಣೆಗಳು ಹಾರ್ಮೋನ್ ಸಮತೋಲನಕ್ಕೆ ಸಹಕಾರಿ, ಮತ್ತು ನೈಸರ್ಗಿಕವಾಗಿ ದೇಹದ ಕಾರ್ಯಗಳನ್ನು ಸುಧಾರಿಸುತ್ತವೆ.

**ಚರ್ಮ ಮತ್ತು ಕೂದಲಿನ ಆರೈಕೆ:** ಚರ್ಮಕ್ಕೆ ಹಾಗೂ ಕೂದಲಿಗೆ ಆರೈಕೆಗಾಗಿ ಎಣ್ಣೆಯನ್ನು ಹಚ್ಚಲು ಉಪಯೋಗಿಸಬಹುದು. ಇದು ತೇವಾಂಶ ಉಳಿಸುವಲ್ಲಿ ಸಹಕಾರಿ. ಸುಲಭವಾಗಿ ಜೀರ್ಣವಾಗುವ ಗುಣ, ದೇಹದ ಅವಶ್ಯಕತೆಗಳಿಗೆ ಹೊಂದಿಕೊಳ್ಳುವಿಕೆ ಮತ್ತು ಯಾವುದೇ ಕೃತಕ ವಸ್ತುಗಳಿಲ್ಲದೆ ನೈಸರ್ಗಿಕವಾಗಿ ತಯಾರಾಗಿರುವ ಕಾರಣ, ಮರದ ಗಾಣದ ಎಣ್ಣೆ ಆರೋಗ್ಯಕ್ಕೆ ಉತ್ತಮ ಆಯ್ಕೆಯಾಗಿದೆ.

JANUARY 2025

| S | M | T | W | T | F | S |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

FEBRUARY 2025

| S | M | T | W | T | F | S |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | |

MARCH 2025

| S | M | T | W | T | F | S |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | 31 | | | | | |

APRIL 2025

| S | M | T | W | T | F | S |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

MAY 2025

| S | M | T | W | T | F | S |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

JUNE 2025

| S | M | T | W | T | F | S |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |

JULY 2025

| S | M | T | W | T | F | S |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

AUGUST 2025

| S | M | T | W | T | F | S |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| 31 | | | | | | |

SEPTEMBER 2025

| S | M | T | W | T | F | S |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

OCTOBER 2025

| S | M | T | W | T | F | S |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

NOVEMBER 2025

| S | M | T | W | T | F | S |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | | | | | | |

DECEMBER 2025

| S | M | T | W | T | F | S |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |